**<u>ಗೌರವಾನ್ವಿತ 1 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ಧರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಬಂಗಾರಪೇಟೆ</u>**

**<u>ಸಿ.ಸಿ. ಸಂಖ್ಯೆ: 1988/2025</u>**

**<u>ಆ ಪಾ ದ ನೆ</u>**

**ಶ್ರೀ ಚಂದ್ರಶೇಖರ್ ಅಲಬೂರ್ ಬಿ.ಎ. ಎಲ್‌ಎಲ್‌ಬಿ** (**ಆನರ್ಸ್**) 1 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಬಂಗಾರಪೇಟೆ ಆದ ನಾನು

**ದೂರುದಾರರು:** **ಸರಸ್ವತಿ .ಹೆಚ್.ಎ,**
ಕೋಂ ಕೃಷ್ಣಮೂರ್ತಿ,

-ವಿರುದ್ಧ-

**ಆರೋಪಿ:** **ತೇಜಸ್ .ಜೆ,**
ಬಿನ್ ಜಗನ್ನಾತ್,

ಎಂಬ ಆರೋಪಿಯಾದ ನಿಮ್ಮ ಮೇಲೆ ಈ ಕೆಳಗಿನಂತೆ ಹೊರಿಸುವ ಆಪಾದನೆ ಏನೆಂದರೆ -

ಆರೋಪಿಯಾದ ನೀವು ಫಿರ್ಯಾದುದಾರನಿಂದ ಪಡೆದಿದ್ದ ಸಾಲದ ಮೊತ್ತಕ್ಕೆ ದಿನಾಂಕ:16.01.2025 ರ ಕೊಟ್ಯಾಕ್ ಮಹೀಂದ್ರ ಬ್ಯಾಂಕ್, ಎ.ಇ.ಸಿ.ಎಸ್ ಲೇ-ಔಟ್, ಕುಂಡಲಹಳ್ಳಿ, ಬೆಂಗಳೂರು ಶಾಖೆಯ ರೂ.7,00,000/- ಮೊತ್ತದ ಪೋಸ್ಟ್ ಡೆಟ್ಡ್ ಚೆಕ್ ಸಂಖ್ಯೆ: 000051 ನ್ನು ಪಿರ್ಯಾದಿಗೆ ನೀಡಿದ್ದು, ಅವರು ಸದರಿ ಚೆಕ್‌ನ್ನು ನಗದೀಕರಣಕ್ಕಾಗಿ ಕೆನರಾ ಬ್ಯಾಂಕ್, ಬಂಗಾರಪೇಟೆ ಶಾಖೆ ರವರ ಮುಖಾಂತರ ಹಾಜರುಪಡಿಸಿದಾಗ, ಆರೋಪಿಯಾದ ನಿಮ್ಮ ಖಾತೆಯಲ್ಲಿ **"Funds Insufficient"** ಎಂದು ದಿನಾಂಕ:17.01.2025 ರಂದು ಹಿಂಬರಹ ಬಂದಿದ್ದು, ಆ ಮೂಲಕ ಸದರಿ ಚೆಕ್ ಅಮಾನ್ಯಗೊಂಡಿದ್ದು, ದಿನಾಂಕ:21.01.2025 ರಂದು ಪಿರ್ಯಾದಿ ತನ್ನ ವಕೀಲರ ಮೂಲಕ ನೋಟಿಸನ್ನು ಆರೋಪಿಯಾದ ನಿಮಗೆ

ನೀಡಿದ್ದು, ಅದನ್ನು ನೀವು ಸ್ವೀಕರಿಸಿರುವುದಿಲ್ಲ, ನೀವು ಪಿರ್ಯಾದಿಗೆ ಕೊಡಬೇಕಾಗಿದ್ದ ಹಣವನ್ನು ಕೊಡದೇ ಇರುವ ಮೂಲಕ ವರ್ಗಾವಣೆ ಲಿಖಿತ ಕಾಯ್ದೆಯ ಕಲಂ.**138** ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಈ ಮೇಲೆ ತಿಳಿಸಿದ ಆಪಾದನೆಗೆ ನೀವು ಗುರಿಯಾಗಬೇಕೆಂದು ಈ ಮೂಲಕ ನಾನು ನಿರ್ದೇಶಿಸುತ್ತೇನೆ.

**ಪ್ರಶ್ನೆಃ** ನಿಮ್ಮ ಮೇಲೆ ಹೊರಿಸಲಾದ ಆಪಾದನೆ ಕೇಳಿದ್ದೀರಾ? ಅದು ನಿಮಗೆ ತಿಳಿಯಿತೇ?

**ಉತ್ತರಃ**

**ಪ್ರಶ್ನೆಃ** ನೀವು ಸದರಿ ಆಪಾದನೆಯನ್ನು ಒಪ್ಪಿ ಕೊಳ್ಳುತೀರಾ? ಅಥವಾ ನಿಮ್ಮ ವಿರುದ್ಧ ವಿಚಾರಣೆ ನಡೆಯಬೇಕೇ ?

**ಉತ್ತರಃ**

**(ಮೇಲಿನ ಆಪಾದನೆಯನ್ನು ಆಪಾದಿತರಿಗೆ ತಿಳಿದಿರುವ ಭಾಷೆಯಲ್ಲಿ ಓದಿ, ತಿಳಿಸಿ ಹೇಳಿ ಅವರು ನೀಡಿದ ಉತ್ತರವನ್ನು ಬರೆದುಕೊಂಡಿರುವುದಾಗಿ ಈ ಮೂಲಕ ದೃಢೀಕರಿಸಲಾಗಿದೆ.)**

ದಿನಾಂಕಃ 01.07.2026.

Sd/-

**1ನೇ ಅಪರ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ., ಬಂಗಾರಪೇಟೆ**